29-6

# IV Semester B.Com. Examination, May/June 2014
## (Repeaters) (Prior to 2010-11)
## KANNADA LANGUAGE – IV
## ವ್ಯಾವಹಾರಿಕ ಕನ್ನಡ ಮತ್ತು ಬೊಳುವಾರು ಮಹಮದ್ ಕುಂಞ ಕಥೆಗಳು

Time : 3 Hours Max. Marks : 90

I. ಕೆಳಗಿನ ಗದ್ಯ ಭಾಗವನ್ನು ಸಂಕ್ಷೇಪಿಸಿ ಸೂಕ್ತ ಶೀರ್ಷಿಕೆ ಕೊಡಿ. (1×10=10)

ಮನುಷ್ಯನ ಮಾತಿಗೆ ಕೊಟ್ಟ ಶಿಷ್ಟ ಪದ ರೂಪವೇ 'ಭಾಷೆ'. ಈ ಭಾಷೆ ಮತ್ತು ತಂತ್ರಜ್ಞಾನದ ಸಂಬಂಧಾಂತರಗಳನ್ನು ಚಿಂತಿಸುವ ಮುನ್ನ ಒಂದು ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬೇಕು. 'ತಂತ್ರಜ್ಞಾನ' ವೆನ್ನುವುದು ಇತ್ತೀಚೆಗೆ ನಾವು ಬಳಸುತ್ತಿರುವ ಆಧುನಿಕತೆಯೆಂಬ ಪರಿಕಲ್ಪನೆಯ ಫಲಿತ ಭಾಗವೇ ? ಆಧುನಿಕತೆಯೆನ್ನುವುದು ಇತ್ತೀಚಿನ ಅಂದರೆ ಸರಿಸುಮಾರು ಇಪ್ಪತ್ತನೆಯ ಶತಮಾನದ ಪರಿಕಲ್ಪನೆಯೆ ? ಹಿಂದೆ ತಂತ್ರಜ್ಞಾನ ಮತ್ತು ಆಧುನಿಕ ಕತೆಗಳು ಇರಲಿಲ್ಲವೆ ?

ತಂತ್ರಜ್ಞಾನವೆನ್ನುವುದು ಆಯಾ ಕಾಲದ ಬದುಕಿನ ಶೋಧ ರೂಪ. ಆಧುನಿಕತೆಯೆನ್ನುವುದು ಆಯಾ ಕಾಲದ ಸಮಕಾಲೀನ ಸ್ವರೂಪ. ನಮ್ಮ ಬದುಕಿಗೆ ಪೂರಕವಾಗಿ ಎತ್ತಿನ ಬಂಡಿಯನ್ನು ಶೋಧಿಸಿದ್ದು ಒಂದು ಅದ್ಭುತ ತಂತ್ರಜ್ಞಾನವಲ್ಲವೆ ? ಚಕ್ರದ ಶೋಧ ಮುಂದಿನ ಅನೇಕ ತಂತ್ರಜ್ಞಾನಗಳಿಗೆ ಆಧಾರವಲ್ಲವೆ ? ನೇಗಿಲನ್ನು ಸಿದ್ಧಪಡಿಸುವ ಬಡಗಿ ಒಬ್ಬ ಕೃಷಿಕ ತಂತ್ರಜ್ಞಾನಿಯಾಗುತ್ತಾನಲ್ಲವೆ ? ನೇಗಿಲ ಕುಳವನ್ನು ತಯಾರಿಸುವ ಕಮ್ಮಾರನೂ ತಂತ್ರಜ್ಞಾನಿಯಲ್ಲವೆ ? ಕಾರು, ಟ್ರ್ಯಾಕ್ಟರುಗಳಂತೆ ಎತ್ತಿನ ಬಂಡಿ, ನೇಗಿಲುಗಳೂ ತಂತ್ರಜ್ಞಾನದ ಫಲಿತ ರೂಪಗಳೇ ಆಗಿವೆ. ತಂತ್ರಜ್ಞಾನವು ಕೇವಲ ನಗರ ಕೇಂದ್ರಿತವಲ್ಲ ; ಆಧುನಿಕತೆಯೂ ಅಷ್ಟೆ. ನಗರೀಕರಣವೇ ಆಧುನಿಕತೆಯಲ್ಲ; ಅಲ್ಲದೆ ಪಾಶ್ಚಾತ್ಯೀಕರಣವಷ್ಟೇ ಆಧುನಿಕತೆಯಾಗುವುದಿಲ್ಲ; ತಂತ್ರಜ್ಞಾನ ಮತ್ತು ಆಧುನಿಕತೆಗಳು ಗ್ರಾಮ ಮತ್ತು ನಗರ ಎರಡರಲ್ಲೂ ಹಾಸು ಹೊಕ್ಕಾಗಿವೆ; ಇವಕ್ಕೊಂದು ಪರಂಪರೆ ಇದೆ. ಬಾವಿಯ ನೀರೆತ್ತಲು ಕಪಿಲೆ ಬಾವಿಯನ್ನು ಚರ್ಮದಲ್ಲಿ ನಿರ್ಮಿಸಿ ಬಳಸುವ ಪದ್ಧತಿಯ ಬದಲು ವಿದ್ಯುತ್ ಪಂಪ್ ಸೆಟ್ಟುಗಳು ಬಂದು ಕೂಡಲೇ ಕಪಿಲೆ ಬಾವಿಯ 'ತಂತ್ರ' ವು ಜ್ಞಾನವೇ ಅಲ್ಲವೆನ್ನಲಾದೀತೆ ? ಬಾವಿಯಿಂದ ನೀರೆತ್ತಲು ಯಾವುದೇ ತಂತ್ರವಿಲ್ಲದಿದ್ದಾಗ ಕಂಡು ಹಿಡಿದ 'ಕಪಿಲೆ ಬಾವಿ'ಯು ಅಂದಿನ ಆಧುನಿಕ ಉತ್ಪನ್ನ; ವಿದ್ಯುತ್ ಪಂಪ್‌ಸೆಟ್ಟು ಅನಂತರದ ಆಧುನಿಕ ಉತ್ಪನ್ನ. ಒಂದು ಕಾಲದ ಆಧುನಿಕ ರೂಪಗಳು ಇನ್ನೊಂದು ಕಾಲಕ್ಕೆ ಹಳೆಯವಾಗಬಹುದು. ಆದರೆ ಚಾರಿತ್ರಿಕ ಮತ್ತು ಪಾರಂಪರಿಕ ಮಹತ್ವವನ್ನು ಕಳೆದುಕೊಳ್ಳುವುದಿಲ್ಲ, ಕಳೆದು ಕೊಳ್ಳಬಾರದು. ಹೀಗೆಂದ ಕೂಡಲೇ ಹಳೆಯದೆಲ್ಲ ಅತ್ಯುತ್ತಮವೆಂಬ ಭಾವನೆಯೂ ಸಲ್ಲದು. ಈ ಮಾತು ಆಧುನಿಕತೆಗೂ ಅನ್ವಯಿಸುತ್ತದೆ.

II. ಹಾಜರಾತಿ ವರದಿ ಎಂದರೇನು ? ಅದರ ಮಾದರಿಯೊಂದನ್ನು ಸಿದ್ಧಪಡಿಸಿ. (1×10=10)

**ಅಥವಾ**

ಜಾಹೀರಾತಿನ ಮುಖ್ಯ ಅಂಶಗಳಾವುವು ? ಶಿಕ್ಷಣ ಸಂಸ್ಥೆಯೊಂದಕ್ಕೆ ಗ್ರೂಪ್ 'ಡಿ' ದರ್ಜೆಯ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸುವ ಜಾಹೀರಾತಿನ ಮಾದರಿಗಳನ್ನು ತಯಾರಿಸಿ.

III. ಸಂಸ್ಥೆಯೊಂದರ ಕಾರ್ಯದರ್ಶಿಯ ಕರ್ತವ್ಯಗಳಾವುವು ? ವಿವರಿಸಿ. (1×10=10)

**ಅಥವಾ**

ಕೊಳಚೆ ನಿರ್ಮೂಲನಾ ಮಂಡಳಿಯ ಸಾಮಾನ್ಯ ಸಭೆಯ ಕಾರ್ಯಸೂಚಿ ಮತ್ತು ನಡಾವಳಿಕೆಯನ್ನು ತಯಾರಿಸಿ.

IV. ಸಮಿತಿ ವರದಿಯ ಗುಣ- ಲಕ್ಷಣಗಳಾವುವು ? ನಿಮ್ಮ ಗ್ರಾಮದ ಹಾಲು ಉತ್ಪಾದಕರ ಸಂಘದ ಸಮಿತಿ ವರದಿಯನ್ನು ರಚಿಸಿ. (1×10=10)

**ಅಥವಾ**

ಏಕ ವ್ಯಕ್ತಿ ವರದಿ ಎಂದರೇನು ? ಉದಾಹರಣೆಯೊಂದಿಗೆ ವಿವರಿಸಿ.

V. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ : (4×5=20)

1) ಕಾರ್ಯ ಸೂಚಿ
2) ಸಂಕ್ಷೇಪ ಲೇಖನ
3) ಜಾಹೀರಾತು ಮತ್ತು ಗ್ರಾಹಕ
4) ವಾರ್ಷಿಕ ಸಭೆ
5) ವರ್ಗೀಕೃತ ಜಾಹೀರಾತು
6) ನಡಾವಳಿಕೆ.

VI. ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : (2×5=10)

1) ತಲಾಕ್ ಎಂದರೇನು ? ಅದ್ದು ತನ್ನ ಹೆಂಡತಿಗೆ ತಲಾಕ್ ನೀಡಲು ಕಾರಣವೇನು ?
2) ಮುತ್ತುಪ್ಪಾಡಿಯ ಜನರು ಬೇಬಿಯ ವಿಷಯವಾಗಿ ಏನೆಂದು ಮಾತನಾಡಿಕೊಳ್ಳುತ್ತಿದ್ದರು ?
3) 'ಅಂಕ' ಕಥೆಯ ಆಶಯವೇನು ?
4) ಮದುವೆಯ ವಿಷಯದಲ್ಲಿ ಇಸ್ಲಾಂ ಧರ್ಮದ ಕಟ್ಟುಪಾಡುಗಳೇನು ?

VII. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20)

1) ಬೊಳುವಾರರ ಕಥೆಗಳಲ್ಲಿ ಕಂಡು ಬರುವ ಸಾಮಾನ್ಯ ಜನರ ಮೇಲಿನ ದೌರ್ಜನ್ಯದ ವಿಭಿನ್ನ ನೆಲೆಗಳನ್ನು ವಿಶ್ಲೇಷಿಸಿ.
2) ಶೆಣೈ, ಗುಂಡಣ್ಣಶೆಟ್ಟಿ, ಸರಳಾಯ, ಹಾಜಿ – ಇವರಲ್ಲಿ ಮೂವರ ಪಾತ್ರ ಪರಿಚಯಿಸಿ.
3) 'ಒಂದು ತುಂಡು ಗೋಡೆ' ಕಥೆಯ ಸ್ವಾರಸ್ಯವನ್ನು ಬರೆಯಿರಿ.
4) 'ಇದ್ದತ್' ಕಥೆಯ ನಾಯಕಿ ಮೆಹರುನ್ನೀಸಳ ಬದುಕಿನ ಹೋರಾಟವನ್ನು ವಿವರಿಸಿ.